**ದಿಃ 09.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಂತರ ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ-1- ಅಂಗನವಾಡಿಯವರು ನೀಡಿರುವ ಪ್ರಮಾಣ ಪತ್ರ

ನಿಪಿ-2- ನನ್ನ ಮಗನ ಜನನ ಪ್ರಮಾಣ ಪತ್ರ

ನಿಪಿ-3 ಮತ್ತು 4- ಆಧಾರ ಕಾರ್ಡಗಳು

**ಪಾಟೀ ಸವಾಲುಃ ಮಾನ್ಯ ಎಜಿಪಿ ರವರಿಂದಃ**

1) ನಾನು 3ನೇ ತರಗತಿವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳ ಮಾಹಿತಿ ಇರುತ್ತದೆ. ನಾನು ಸಹಿ ಮಾಡಲು ಮಾತ್ರ ಕಲಿತಿರುತ್ತೇನೆ. ನನ್ನ ಮಗನ ಜನನ ಪ್ರಮಾಣ ಪತ್ರದಲ್ಲಿ ನನ್ನ ಹೆಸರು ಬಸವರಾಜ ಬದಲು ಬಸಪ್ಪಾ ಎಂದು ತಪ್ಪಾಗಿ ನಮೂದಾಗಿದ್ದು ಮತ್ತು ನನ್ನ ಮಗನ ಹೆಸರು ನಮೂದಿರದ ಕಾರಣ ದಾವೆ ಸಲ್ಲಿಸಿರುತ್ತೇನೆ. ನನ್ನ ಮಗ ದಿಃ 20-06-2009ರಂದು ಮನೆಯಲ್ಲಿ ಜನಿಸಿರುತ್ತಾನೆ. ಅವನು ಜನಿಸಿದ ನಂತರ ತಲಾಟಿಯ ಹತ್ತಿರ ಮಾಹಿತಿನ್ನು ನೀಡಿರುತ್ತೇನೆ. ಬೆರೆಯವರಿಂದ ಬರೆಸಿ ಮಾಹಿತಿ ನೀಡಿರುತ್ತೇನೆ. ಸದರಿ ಮಾಹಿಯನ್ನು ನೀಡದ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ. ವಾದಿ ಈಗ ಪ್ರಥಮ ಪಿಯುಸಿ ಓದುತ್ತಿದ್ದಾನೆ.

ವಾದಿಯ ಹೆಸರನ್ನು ಶಾಲಾಯಲ್ಲಿ ದಾಖಲಿಸುವ ಅವನ ಜನನ ಪ್ರಮಾಣ ಪತ್ರವನ್ನು ಪಡೇದರುತ್ತಾರೆ ಎಂದರೆ ಸರಿಯಲ್ಲ . ಈಗ ಯಾವುದೆ ಶಾಲೆಗೆ ಪ್ರವೇಶ ನೀಡುವ ಸಮಯದಲ್ಲಿ ಜನನ ಪ್ರಮಾಣ ಪತ್ರ ಅವಶ್ಯವಾಗಿ ಹಾಜರುಪಡಿಸಬೇಕು ಎಂದರೆ ಸರಿಯಲ್ಲ . ನನ್ನ ಮಗನ ಆಧಾರ ಕಾರ್ಡ ಇದ್ದು ಅದರಲ್ಲಿ ಜನನ ದಿನಾಂಕ ತಪ್ಪಾಗಿ ನಮೂದು ಆಗಿರುವುದರಿಂದ , ಅದನ್ನು ತಿದ್ದುಪಡಿ ಮಾಡಿಕೊಳ್ಳಲು ದಾವೆ ಸಲ್ಲಿ ಸಿದ್ದು, ಅದನ್ನು ಹಾಜರುಪಡಿಸಿರುವುದಿಲ್ಲ. ಅವನ ಆಧಾರ ಕಾರ್ಡನ್ನು ಹಾಜರು ಪಡಿಸಲು ತೊಂದರೆ ಇಲ್ಲ. ವಾದಿಯ ಆಧಾರ ಕಾರ್ಡನ್ನು ಯಾವಾಗ ಪಡೆದಿರುತ್ತೇನೆ ಎಂದ ನೆನಪಿಲ್ಲ. ಅದನ್ನು ನೀಡುವಾಗಲು ಸಹ ಜನನ ಪ್ರಮಾಣ ಪತ್ರ ಪಡೆದಿರುತ್ತಾರೆ ಎಂದರೆ ಸರಿಯಲ್ಲ . ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ 10ನೇ ತರಗತಿಗೆ ಅರ್ಜಿ ತುಂಬುವಾಗ ಅವನ ಜನನ ಪ್ರಮಾಣ ಪತ್ರದ ಮಾಹಿತಿ ಮೇರೆಗೆ ಬರೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ವಾದಿಯ ಜನನ ಪ್ರಮಾಣ ಪತ್ರವನ್ನು ಯಾವಾಗ ಪಡೆದಿರುತ್ತೇನೆ ಎಂದು ನನಗ ನೆನಪಿಲ್ಲ. ನಿಪಿ-2ರಲ್ಲಿ ನನ್ನ ಮಗನ ಹೆಸರು ನಮೂದು ಇರದೆ ಇರುವ ಬಗ್ಗೆ 2 ತಿಂಗಳ ಹಿಂದೆ ಗೊತ್ತಾಗಿದೆ. ಅದೇ ರೀತಿ ನನ್ನ ಹೆಸರು ತಪ್ಪಾಗಿ ನಮೂದಾದ ಬಗ್ಗೆ 6 ತಿಂಗಳ ಹಿಂದೆ ಗೊತ್ತಾಗಿದೆ. ನಾನು ಹೇಳಿರುವ ಮಾಹಿತಿಯ ಮೇಲೆ ನಿಪಿ-2ರಲ್ಲಿ ನನ್ನ ಹೆಸರು ನಮೂದು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ದಾವಾ ಕಾರಣ ಇಲ್ಲದಿದ್ದರು, ಪ್ರತಿವಾದಿಗಳ ತಪ್ಪಿಲ್ಲದಿದ್ದರು, ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಹೆ. ದಿ.&ನ್ಯಾದಂ., ಗೋಕಾಕ.